ಶಾಂತಿ ಗ್ರಾಮ ಹೋಬಳಿ 1. ಗೋರುರು–ಬಿನಕುರಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ) 2. ಹೊಸಹಳ್ಳಿ – ಬಿಡಿಗನವಿಕೆ ಹಳ್ಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ) 3. ಬೆಟ್ಟದಪುರ – ಹೆರಗು – ಶಾಂತಿ ಗ್ರಾಮ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ) 4. ಕಾಶಿಕ – ಮರ್ಕುಲಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	13.90	0.14	
5. ಕಾಶಿಕ – ಮರ್ಕುಲಿ ರಸ್ತೆ (ಜಿಲ್ಲಾ ಪರಿಷತ್ ವ್ಯಾಪ್ತಿ)	0.20	0.26	ದುರಸ್ಥಿ ಮುಗಿದಿದೆ
6. ಅಂಜುಗ–ಗುಡುಗನಹಳ್ಳಿ – ಬನವಾಸಿ (ಜಿಲ್ಲಾ ಪರಿಷತ್ ವ್ಯಾಪ್ತಿ)	1.00	0.57	ಮಾರ್ಚ್ 93ರ ಒಳಗಾಗಿ ಮುಗಿಸಲಾಗುವುದು
7. ಬಿ.ಎಂ. ರಸ್ತೆಯಿಂದ ಕಾಶಿಕ – ಮರ್ಕುಲಿ ವಯಾ ದೊಡ್ಡಗೇಣಿಗೆರೆ ರಸ್ತೆ (ಜಿಲ್ಲಾ ಪರಿಷತ್ ವ್ಯಾಪ್ತಿ)	0.15	0.07	
	22.81	1.20	

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಡ್ಯಾಮೇಜ್ ಆದ ಕೆರೆಗಳು

153 (543) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತಿಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಧಾರಾಕಾರ ಮಳೆಯಿಂದ ಯಾವ ಯಾವ ಊರುಗಳಲ್ಲಿ ಯಾವ ಯಾವ ಸಣ್ಣ ಕೆರೆಗಳಿಗೆ ಹಾನಿಯಾಗಿದೆ (ವಿವರ ಕೊಡುವುದು);

ಆ) ಈ ಎಲ್ಲಾ ಕೆರೆಗಳ ದುರಸ್ತಿಗೆ ಅಂದಾಜುಗಳು ತಯಾರಾಗಿವೆಯೇ (ವಿವರ ಕೊಡುವುದು);

ಈ) ಈ ಬಾಬ್ತಿನಲ್ಲಿ ಇದುವರೆವಿಗೆ ಆ ಕೆರೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಉ) ಆ ಕೆರೆಗಳ ದುರಸ್ತಿಯು ಎಷ್ಟು ಕಾಲಾವಧಿಯಲ್ಲಿ ಮುಗಿಯಲಿದೆ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಆ) 1992ನೇ ಸಾಲಿನಲ್ಲಿ ಬಿದ್ದ ಧಾರಾಕಾರ ಮಳೆಯಿಂದ ಹಾಸನ ಕ್ಷೇತ್ರದ ಕಟ್ಟಾಯ ಮತ್ತು ಶಾಂತಿಗ್ರಾಮ ಹೋಬಳಿಗಳಲ್ಲಿ ಒಟ್ಟು 5 ಕೆರೆಗಳಿಗೆ ಹಾನಿಯಾಗಿರುತ್ತದೆ.

(ಅಂದಾಜು ಲಕ್ಷರೂ.ಗಳಲ್ಲಿ)

1. ಕಸಬ ಹೋಬಳಿಯಲ್ಲಿ ಯಾವುದೇ ಕೆರೆ ಹಾನಿ ಆಗಿರುವುದಿಲ್ಲ	0.000
2. ಕಟ್ಟಾಯ ಹೋಬಳಿ	
ಅ) ಹಂದಿನಕೆರೆ	0.655
ಆ) ನಾಯ್ಕನಹಳ್ಳಿ ದೊಡ್ಡ ಕೆರೆ	1.31
ಇ) ಕಿತ್ತನೆಕೆರೆ ದೊಡ್ಡ ಕೆರೆ	0.50
3. ಶಾಂತಿಗ್ರಾಮ ಹೋಬಳಿ	
ಅ) ಕೌಶಿಕಾ ದೊಡ್ಡಕೆರೆ	3.20
ಆ) ಹೊಳಲು ದೊಡ್ಡಕೆರೆ	3.00
ಒಟ್ಟು	8.665

ಅ) ಹೌದು

(ವಿವರ ಮೇಲಿನಂತಿದೆ)

ಇ) ಒಟ್ಟು ರೂ. 8.665 ಲಕ್ಷ

ಈ) ರೂ. 6.30 ಲಕ್ಷ

ಉ) ಹಣಕಾಸಿನ ಲಭ್ಯತೆಯ ಮೇರೆಗೆ ಶೀಘ್ರವಾಗಿ ಮುಗಿಸಲಾಗುವುದು.

ಭದ್ರಾವತಿ – ಶಿವನಿ ರಸ್ತೆ ರಿಪೇರಿ

164 (749) ಶ್ರೀ ಕರಿಯಣ್ಣ (ಹೊಳೆಹೊನ್ನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿಯಿಂದ ಚನ್ನಗಿರಿ, ತಾಲ್ಲೂಕು ಶಿವನಿಗೆ ಕೇವಲ 15 ಕಿ.ಮೀ.ನಿಂದ 18 ಕಿ.ಮೀ. ಒಳಗೆ ತಲುಪುವ ರಸ್ತೆಯನ್ನು ಸುಮಾರು 10 ವರ್ಷದಿಂದ ದುರಸ್ತಿ ಮಾಡಿದರೂ ಪೂರ್ಣವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇದರಿಂದ ಶಿವನಿಗೆ ಹೋಗುವವರು ಸುಮಾರು 60 ಕಿ.ಮೀ. ಬಳಸಿ ಹೋಗಬೇಕಾಗುವುದು ನಿಜವೆ;

ಇ) ಈ ರಸ್ತೆಯನ್ನು ಯಾವಾಗ ಪೂರ್ಣ ಮಾಡಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಭದ್ರಾವತಿ-ಶಿವನಿ ರಸ್ತೆಯು 20.80 ಕಿ.ಮೀ. ಉದ್ದವಿದ್ದು ಹಂತ ಹಂತವಾಗಿ ಡಾಂಬರು ಮಾಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಲ್ಲ

LA.Vol-4.